ಮೂರನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ,,
ಕನಕಪುರ

ಸಿ.ಸಿ ನಂ. **958/2020**

| | | | |
|---|---|---|---|
| **ಚಾಸಾ ಃ** | **5** | **ಪ್ರಾಸಾಃ-** | **1** |

| | |
|---|---|
| ಹೆಸರು | ಕೃಷ್ಣಕಾಂತ್ ಬನ್ನೂರು |
| ತಂದೆಯ ಹೆಸರು | ದ್ಯಾಮಾಣ್ಣ |
| ವಯಸ್ಸು | 33 |
| ಉದ್ಯೋಗ | ಪೊಲೀಸ್ ಪೇದೆ |
| ವಿಳಾಸ | ಸಾತನೂರು |

- - - - - - - - - - - - - - - - - - - - - - - - - - - - -

**ದಿಃ12.03.2025ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-

ನಾನು ದಿ.೦೬.೦೨.೨೦೧೯ ರಿಂದ ಇಲ್ಲಿಯವರೆಗೆ ಸಾತನೂರು ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ.೨೯.೦೩.೨೦೨೦ ರಂದು ಠಾಣಾ ಕರ್ತವ್ಯದಲ್ಲಿದ್ದಾಗ ಮಧ್ಯಾಹ್ನ ೩ಃ೦೦ ಗಂಟೆಗೆ ಭೂಹಳ್ಳಿ ಗ್ರಾಮದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆಂದು ಬಾತ್ಮಿ ಬಂದಿರುತ್ತದೆ. ಸದರಿ ಬಾತ್ಮಿ ಬಂದಿರುವ ವಿಚಾರವನ್ನು ನಾನು ಚಾಸಾ-೧ ರವರಿಗೆ ತಿಳಿಸಿರುತ್ತೇನೆ. ಚಾಸಾ-೧ ರವರು ಅವರ ಕೂಡಲೇ ಚಾಸಾ-೬, ಚಾಸಾ-೭ ರವರನ್ನು ಬರಮಾಡಿಕೊಂಡು ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವ ವಿಚಾರವನ್ನು ಅವರಿಗೆ ಹೇಳಿ ದಾಳಿ ಮಾಡಬೇಕಾಗುತ್ತದೆ ಎಂದು ಹೇಳಿ ನಾನು, ಚಾಸಾ-೬ ಮತ್ತು ೭ ರವರನ್ನು ಚಾಸಾ-೧ ರವರು ಕೆಎ-೪೨-ಜಿ-೯೨೪ ರ ಜೀಪಿನಲ್ಲಿ ಭೂಹಳ್ಳಿ ಗ್ರಾಮಕ್ಕೆ ಕರೆದುಕೊಂಡು ಹೋಗಿರುತ್ತಾರೆ. ಸದರಿ ಗ್ರಾಮದ ಸರ್ಕಲ್ ನಲ್ಲಿ ವಾಹನವನ್ನು ನಿಲ್ಲಿಸಿ ಮೂರು ಜನ ಪಂಚರನ್ನು ಬರಮಾಡಿಕೊಂಡು ಅವರಿಗೆ ಸದರಿ ವಿಚಾರವನ್ನು ತಿಳಿಸಿ ಅವರು ಪಂಚರಾಗಲು

ಒಪ್ಪಿದ ಮೇರೆಗೆ ಅದೇ ಜೀಪಿನಲ್ಲಿ ಪಂಚರನ್ನು ಸಹ ಕರೆದುಕೊಂಡು ಹೋಗಿ ಮಿಷನ್ ಮನೆಯ ಬಳಿ ಹೋಗಿರುತ್ತೇವೆ.

ನಾವು ಘಟನಾ ಸ್ಥಳಕ್ಕೆ ಹೋಗುತ್ತಿದ್ದಂತೆ ಅಲ್ಲಿದ್ದಂತಹ ರಾಜನಿಂಗಯ್ಯ ರವರು ಓಡಿ ಹೋಗಿರುತ್ತಾರೆ. ನಂತರ ನಾವು ಎಲ್ಲರೂ ಸದರಿ ಮಿಷನ್ ಮನೆಯಲ್ಲಿ ಪರಿಶೀಲನೆ ಮಾಡಿದಾಗ ರಟ್ಟಿನ ಬಾಕ್ಸಿನಲ್ಲಿ **೧೮೦** ಎಂಎಲ್ ನ ಒಲ್ಡ್‌ಟವರಿನ್ ವಿಸ್ಕಿ **೩೦** ಪೌಚ್ ಗಳು, **೯೦** ಎಂ.ಎಲ್ ನ ಒಲ್ಡ್‌ಟವರಿನ್ ವಿಸ್ಕಿ **೬೦** ಪೌಚುಗಳು ಕಂಡುಬಂದಿರುತ್ತವೆ. ಸದರಿ ಮಾಲಿನ ಪೈಕಿ ತಲಾ ಒಂದೊಂದು ಪೌಚುಗಳನ್ನು ಪಂಚರ ಸಮಕ್ಷಮ ಮಾದರಿ ತೆಗೆದು ಬಿಳಿಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ ಎ ಎಂಬ ಅಕ್ಷರದಿಂದ ಮೊಹರು ಮಾಡಿ, ಉಳಿದ ಮದ್ಯವನ್ನು ಅಮಾನತ್ತುಪಡಿಸಿಕೊಂಡಿರುತ್ತೇವೆ. ಆದೇ ದಿನ ಪಂಚರ ಸಮಕ್ಷಮ ಸಂಜೆ **೪:೦೦** ರಿಂದ **೫:೦೦** ಗಂಟೆ ಸಮಯದಲ್ಲಿ ಪಂಚನಾಮೆ ಕ್ರಮ ಜರುಗಿಸಿ ಪಂಚರ ಮತ್ತು ನನ್ನ ಸಹಿ ಪಡೆದಿರುತ್ತಾರೆ.

ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ಪಂಚನಾಮೆಯಾಗಿದ್ದು, ಅದನ್ನು ನಿಪಿ-**೧**, ಸಾಕ್ಷಿಯ ಸಹಿಯನ್ನು ನಿಪಿ-**೧**(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಅಮಾನತ್ತುಪಡಿಸಿಕೊಂಡಿರುವ ಪೌಚುಗಳಾಗಿದ್ದು, ಅವುಗಳನ್ನು ಎಂಒ-**೧** ಮತ್ತು **೨** ಎಂದು ಗುರುತಿಸಲಾಯಿತು.

ಆ ದಿನ ನಮ್ಮನ್ನು ನೋಡಿ ಓಡಿ ಹೋದ ಆಸಾಮಿಯೇ ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿಯಾಗಿರುತ್ತಾನೆ. ಸದರಿ ವಿಚಾರದ ಬಗ್ಗೆ ನಾನು ಚಾಸಾ-**೧೦** ರವರ ಮುಂದೆ ಹೇಳಿಕೆ ನೀಡಿರುತ್ತೇನೆ.

<u>ಪಾಟೀ ಸವಾಲು ಶ್ರೀಮತಿ ಆರ್.ಕೆ (ಸಿಎಂಜೆ) ಆರೋಪಿ ಪರ ವಕೀಲರಿಂದಃ-</u>

ನಾನು ಠಾಣೆಯಲ್ಲಿದ್ದಾಗ ನನಗೆ ಮದ್ಯಾಹ್ನ **3:00** ಗಂಟೆಗೆ ಬಾತ್ಮಿ ಬಂದಿರುತ್ತದೆ. ನನಗೆ ಬಾತ್ಮಿ ಬಂದಾಗ ಚಾಸಾ-**1** ರವರು ಠಾಣೆಯಲ್ಲಿದ್ದರು. ನನಗೆ ಬಾತ್ಮಿ ಬಂದ

15 ನಿಮಿಷಗಳ ನಂತರ ಠಾಣೆ ಬಿಟ್ಟಿರುತ್ತೇವೆ. ಠಾಣೆಯಿಂದ ಭೂಹಳ್ಳಿ ಗೆ ಹೋಗುವಷ್ಟರಲ್ಲಿ ಮಧ್ಯಾಹ್ನ 3ಃ30 ಗಂಟೆ ಸಮಯ ಆಗಿತ್ತು. ನಾವು ಭೂಹಳ್ಳಿ ಸರ್ಕಲ್‌ನಲ್ಲಿ 10 ರಿಂದ 15 ನಿಮಿಷ ಇದ್ದೆವು. ಆರೋಪಿಯ ಮಿಷನ್ ಮನೆ ಭೂಹಳ್ಳಿಗೆ ಗಸ್ತು ಮಾಡುತ್ತಿದ್ದುದ್ದರಿಂದ ಆರೋಪಿಯ ಮಿಷನ್ ಮನೆ ಗೊತ್ತಿತ್ತು. ನಾವು ಘಟನಾ ಸ್ಥಳಕ್ಕೆ ಹೋದಾಗ ಮಧ್ಯಾಹ್ನ 3ಃ55 ಗಂಟೆಯಾಗಿತ್ತು. ಸದರಿ ಮಿಷನ್ ಮನೆಯು ಆರೋಪಿಗೆ ಸೇರಿದ್ದು ತೋರಿಸಲು ಪಂಚಾಯಿತಿಯಿಂದ ದಾಖಲೆ ಪಡೆದಿರುತ್ತೇವೆ. ಆರೋಪಿಯ ಹೆಸರಿನಲ್ಲಿ ಯಾವುದೇ ಕಂದಾಯ ದಾಖಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ.

ಘಟನಾ ಸ್ಥಳದಲ್ಲಿ ಯಾವುದೇ ಮದ್ಯ ಇರಲಿಲ್ಲ, ನಾವು ಯಾವುದೇ ಮದ್ಯವನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾವು ಪಂಚರ ಸಮಕ್ಷಮ ಘಟನಾ ಸ್ಥಳಕ್ಕೆ ಹೋಗಿ ದಾಳಿ ಮಾಡಿಲ್ಲ, ಮಹಜರ್ ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಘಟನಾ ಸ್ಥಳದಲ್ಲಿ ಮದ್ಯವನ್ನು ಮಾರಾಟ ಮಾಡದೆ ಇದ್ದರೂ ಸಹ ಆರೋಪಿಯ ವಿರೋದಿದಾರರು ನೀಡಿದಂತಹ ಸುಳ್ಳು ಮಾಹಿತಿಯ ಮೇರೆಗೆ ಘಟನಾ ಸ್ಥಳಕ್ಕೆ ಹೋಗಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃಇಲ್ಲ**

**(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಡಿಕರೀಸುತ್ತೇನೆ.)**

**ಓ ಹೇ ಕೇ ಸರಿ ಇದೆ,**

**ಮೂರನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ., ಕನಕಪುರ.**

ಮೂರನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ,,
ಕನಕಪುರ

ಸಿ.ಸಿ ನಂ. **958/2020**

| **ಚಾಸಾ ಃ** | **4** | **ಪ್ರಾಸಾಃ-** | **2** |
|---|---|---|---|
| ಹೆಸರು | ರಾಜು | | |
| ತಂದೆಯ ಹೆಸರು | ಲಿಂಗೇಗೌಡ | | |
| ವಯಸ್ಸು | 54 | | |
| ಉದ್ಯೋಗ | ವ್ಯವಸಾಯ | | |
| ವಿಳಾಸ | ಭೂಹಳ್ಳಿ | | |

- - - - - - - - - - - - - - - - - - - - - - - - - - - - - - -

**ದಿಃ12.03.2025ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು.**

ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-

ನ್ಯಾಯಾಲಯದ ಮುಂದಿರುವ ಆರೋಪಿತನ ಪರಿಚಯವಿದೆ. ಚಾಸಾ-೧ ರಿಂದ ೩, ೬ ರಿಂದ ೧೦ ರವರ ಪರಿಚಯವಿಲ್ಲ. ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ.

ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಜರುಗಿಸಿಲ್ಲ ಮತ್ತು ಏನನ್ನು ಜಪ್ತಿಪಡಿಸಿಲ್ಲ. ನನಗೆ ಈಗ ತೋರಿಸಿದ ಒಂದು ದಾಖಲೆಯಲ್ಲಿ ನನ್ನ ಸಹಿ ಇರುತ್ತದೆ. ಆ ದಾಖಲೆಯು ಪಂಚನಾಮೆಯಾಗಿದ್ದು, ಅದನ್ನು ನಿಪಿ-೧ ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-೧(ಬಿ) ಎಂದು ಗುರುತಿಸಲಾಯಿತು. ನಿಪಿ-೧ ರಲ್ಲಿ ಬರೆದ ವಿಚಾರಗಳು ನನಗೆ ಗೊತ್ತಿಲ್ಲ.

ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ. ಅವರಿಗೆ ನಾನು ಹೇಳಿಕೆಯನ್ನು ನೀಡಿಲ್ಲ.

ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರು ರವರು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.

ಪಾಟೀ ಸವಾಲು ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-

ದಿನಾಂಕ.29.03.2020 ರಂದು ಸಂಜೆ 4ಃ00 ರಿಂದ 5ಃ00 ಗಂಟೆ ಸಮಯದಲ್ಲಿ ಘಟನಾ ಸ್ಥಳದಲ್ಲಿ ಪೋಲೀಸರು ನನ್ನ ಸಮಕ್ಷಮ ನಿಪಿ-1 ರಂತೆ ಪಂಚನಾಮ ಕ್ರಮ ಜರುಗಿಸಿ ಮದ್ಯವನ್ನು ಅಮಾನತ್ತು ಪಡಿಸಿಕೊಂಡು ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

ದಿನಾಂಕ.30.03.2020 ರಂದು ಪೋಲೀಸರಿಗೆ ಹೇಳಿಕೆ ನೀಡಿದ್ದೇನೆಂದರೆ ಸರಿಯಲ್ಲ. ಸಾಕ್ಷಿಗೆ ತನ್ನ ಹೇಳಿಕೆಯನ್ನು ಓದಿ ಹೇಳಿದ್ದು, ಸಾಕ್ಷಿಯು ತನ್ನ ಹೇಳಿಕೆಯನ್ನು ತಿರಸ್ಕರಿಸಿದ್ದರಿಂದ ಅದನ್ನು ನಿಪಿ-3 ಎಂದು ಗುರುತಿಸಲಾಯಿತು.

ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ-

ಆರೋಪಿ ಪರ ವಕೀಲರು ತಮ್ಮ ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

**ಮರುವಿಚಾರಣೆ ಃಇಲ್ಲ**

**(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಢಿಕರೀಸುತ್ತೇನೆ.)**

**ಓ ಹೇ ಕೇ ಸರಿ ಇದೆ,**

**ಮೂರನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ., ಕನಕಪುರ.**